ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-9 ಸಂಚಿಕೆ-2 | ತ್ರೈಮಾಸಿಕ ಏಪ್ರಿಲ್-ಜೂನ್ 2022 | ಪುಟಗಳು-12



# ವಿದ್ಯುತ್ ಪರಿವರ್ತಕಗಳ ನಿರ್ವಹಣಾ ಅಭಿಯಾನ












# ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ನುಡಿ



ಕಳೆದ ತಿಂಗಳುಗಳಲ್ಲಿ ತಮ್ಮೆಲ್ಲರ ಅವಿರತ ಶ್ರಮ ಹಾಗೂ ದೃಢಸಂಕಲ್ಪದ ಕರ್ತವ್ಯ ನಿಷ್ಠೆ ಪ್ರೇರಣಾದಾಯಕವಾದದ್ದು, ಗ್ರಾಹಕ ಸ್ನೇಹಿ ಸೇವೆ ನೀಡುವಲ್ಲಿ ನಮ್ಮ ಎಲ್ಲಾ ಅಧಿಕಾರಿ ವರ್ಗದವರು, ಸಿಬ್ಬಂದಿ ವರ್ಗದವರು ಅತ್ಯಂತ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುತ್ತಿರುವುದು ಅತ್ಯಂತ ಖುಷಿಯ ವಿಚಾರ.

ನಮ್ಮೆಲ್ಲಾ ಆತ್ಮೀಯ ಸಿಬ್ಬಂದಿಗಳಿಗೂ ಹಾಗೂ ಅಧಿಕಾರಿಗಳಿಗೆ ಯುಗಾದಿ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರುತ್ತಿದ್ದೇನೆ. ನಿಮ್ಮ ಕುಟುಂಬದವರಿಗೂ ಹಾಗೂ ಬಂಧು ಮಿತ್ರರಿಗೂ ದೇವರು ಆಯುರಾರೋಗ್ಯ ಭಾಗ್ಯವಿತ್ತು ಹರಸಲಿ.

ಬೆಸ್ಕಾಂ ಗ್ರಾಹಕರಿಗೆ ಅತ್ಯುತ್ತಮ ಗುಣಮಟ್ಟದ ಸೇವೆ ನೀಡುವಲ್ಲಿ ಅವಿರತ ಶ್ರಮಿಸುತ್ತಿದೆ. ಈಗಾಗಲೇ ಹಲವು ಯಶಸ್ವಿ ಯೋಜನೆಗಳ ಮೈಲಿಗಲ್ಲನೊಂದಿಗೆ, **ಗ್ರಾಹಕ ಸ್ನೇಹಿ** ಸೇವೆಗೆ ಬೆಸ್ಕಾಂ ಸದಾ ಬದ್ಧ ಎನ್ನುವುದನ್ನು ನಿರೂಪಿಸುತ್ತಿದೆ.

ಗ್ರಾಹಕ ಸಂಬಂಧಿ ಸೇವೆಗಳಲ್ಲಿ ವಿಶೇಷ ಮುತುವರ್ಜಿಯನ್ನು ತೋರಿರುವ ಬೆಸ್ಕಾಂ ತ್ವರಿತ ಸಹಾಯಕ್ಕಾಗಿ ಗ್ರಾಹಕರಿಗೆ ವಿಶೇಷ ಯೋಜನೆಗಳನ್ನು ಜಾರಿಗೊಳಿಸಿದ್ದು, ಗ್ರಾಹಕರು ಪ್ರಶಂಸಿಸುವ ಮಟ್ಟಕ್ಕೆ ಉತ್ತಮ ಸೇವೆಯನ್ನು ನೀಡಿರುವುದು ಬೆಸ್ಕಾಂನ ಯಶಸ್ಸಿನ ಪಯಣಕ್ಕೆ ಕಳಶಪ್ರಾಯವಾಗಿದೆ.

ಮಾರ್ಚ್ ಅಂತ್ಯದಲ್ಲಿ ಹೊಸ ಹಣಕಾಸು ವರ್ಷಕ್ಕೆ ಕಾಲಿಟ್ಟು, ಕೋವಿಡ್ ಮಹಾಮಾರಿಯ ಕಾರಣದಿಂದ ಎದುರಾದ ಹಲವಾರು ಸವಾಲುಗಳನ್ನು ಎದುರಿಸಿ, ಕಳೆದ ಅವಧಿಯಲ್ಲಿ ತಾವೆಲ್ಲರೂ ನೀಡಿರುವ ಸೇವೆ ಅತ್ಯಮೂಲ್ಯವಾಗಿದೆ. ಗ್ರಾಹಕರಿಗಾಗಿ ತಮ್ಮ ಸ್ವಾಸ್ಥ್ಯವನ್ನೂ ಲೆಕ್ಕಿಸದೆ, ಹಗಲಿರುಳು ಶ್ರಮಿಸಿದ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಬೆಸ್ಕಾಂ ಆಭಾರಿಯಾಗಿದೆ.

ಇಂಧನ ಇಲಾಖೆಯ ಸೂಚನೆಯಂತೆ ಮೇ ೦೫, ೨೦೨೨ ರಿಂದ ಮೇ ೨೦, ೨೦೨೨ ರವರೆಗೆ ಬೆಸ್ಕಾಂ ಕಾರ್ಯವ್ಯಾಪ್ತಿಯಲ್ಲಿ ವಿದ್ಯುತ್ ಪರಿವರ್ತಕಗಳ ನಿರ್ವಹಣಾ ಅಭಿಯಾನವನ್ನು ಕೈಗೊಂಡಿದ್ದು, ದಾಖಲೆಯ ಮಟ್ಟದ ವಿದ್ಯುತ್ ಪರಿವರ್ತಕಗಳ ಯಶಸ್ವಿ ನಿರ್ವಹಣೆ ನಡೆಸಿ, ಗ್ರಾಹಕರಿಗೆ ನಿರಂತರ ವಿದ್ಯುತ್ ಪೂರೈಕೆ ನೀಡುವ ನಿಟ್ಟಿನಲ್ಲಿ ಬೆಸ್ಕಾಂ ಅಧಿಕಾರಿಗಳು, ಪವರ್‌ಮೆನ್‌ಗಳು ಹಾಗೂ ಸಿಬ್ಬಂದಿ ವರ್ಗತೋರಿದ ಕರ್ತವ್ಯ ಪ್ರಜ್ಞೆ ನಿಜಕ್ಕೂ ಆದರ್ಶಪ್ರಾಯವಾಗಿದೆ.

ಬೆಸ್ಕಾಂ ತನ್ನ ಗ್ರಾಹಕ ಸಿಬ್ಬಂದಿ ಸೇವೆಗಳಲ್ಲಿ ಐತಿಹಾಸಿಕ ನಿರ್ಧಾರವನ್ನು ಕೈಗೊಂಡಿದ್ದು, ಗ್ರಾಹಕರ ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕಾಗಿ ಬೆಸ್ಕಾಂ ಕಾರ್ಯವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ, ಜಿಲ್ಲೆಗೊಂದು ವಾಟ್ಸಾಪ್ ಸಹಾಯವಾಣಿಯನ್ನು ಆರಂಭಿಸಲಾಗಿದ್ದು, ಗ್ರಾಹಕರು ತಮ್ಮ ಜಿಲ್ಲೆಗೆ ನೀಡಲಾದ ಬೆಸ್ಕಾಂ ವಾಟ್ಸಾಪ್ ಸಹಾಯವಾಣಿ ಸಂಖ್ಯೆಗೆ ಸಂದೇಶ, ಬಾಗಿರುವ ಅಥವಾ ಹಾನಿಯಾಗಿರುವ ಕಂಬಗಳ ಹಾಗೂ ಇತರೆ ವಿದ್ಯುತ್ ಸಂಬಂಧಿತ ವಿಷಯಗಳ ಛಾಯಚಿತ್ರ ಮತ್ತು ವಿಡಿಯೋ ಕಳುಹಿಸುವ ಮೂಲಕ, ತ್ವರಿತ ಪರಿಹಾರ ಪಡೆಯುವ ಅವಕಾಶ ನೀಡಲಾಗಿದ್ದು, ಈ ವ್ಯವಸ್ಥೆ ಅತ್ಯಂತ ಜನಪ್ರಿಯವಾಗುತ್ತಿದೆ ಹಾಗೂ ಗ್ರಾಹಕರ ಮೆಚ್ಚುಗೆಗೆ ಪಾತ್ರವಾಗಿದೆ.

ಗ್ರಾಹಕರಿಗೆ ನಿರೀಕ್ಷೆಯ ಮಟ್ಟಕ್ಕೂ ಮೀರಿದ ಉತ್ತಮ ಗುಣಮಟ್ಟದ ಸೇವೆ ನೀಡುವ ನಿಟ್ಟಿನಲ್ಲಿ ತಮ್ಮೆಲ್ಲರ ಸೇವೆ ಅತ್ಯಮೂಲ್ಯವಾಗಿದೆ. ನಿಮ್ಮ ದಣಿವರಿಯದ ಸೇವೆಗೆ ಆಭಾರಿಯಾಗಿದ್ದೇವೆ. ಗ್ರಾಹಕ ಸ್ನೇಹಿಯಾಗಿ ಸೇವೆ ನೀಡುವ ನಿಟ್ಟಿನಲ್ಲಿ ಬೆಸ್ಕಾಂ ಹೊಸ ಮೈಲಿಗಲ್ಲನ್ನು ತಲುಪುವಲ್ಲಿ ತಮ್ಮೆಲ್ಲರ ಸಹಕಾರ ಹೀಗೆಯೇ ಇರಲಿ ಹಾಗೂ ತಮ್ಮ ಸೇವಾ ಮನೋಭಾವ ಸದಾ ಹೀಗೆಯೇ ಇರಲಿ ಎಂದು ಆಶಿಸುತ್ತೇನೆ.

**ಪಿ.ರಾಜೇಂದ್ರ ಚೋಳನ್**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

## ಸಂಪಾದಕೀಯ



ಆತ್ಮೀಯರೆ,

ನಾವು ಈಗ ಬೇಸಿಗೆ ದಿನಗಳಿಗೆ ಕಾಲಿಟ್ಟಿದ್ದೇವೆ. ಏಪ್ರಿಲ್ ಮೊದಲ ವಾರದಲ್ಲಿ ಯುಗಾದಿ ಹಬ್ಬವನ್ನೂ ಆಚರಿಸಿದ್ದೇವೆ. ಯುಗಾದಿ ಎಂದರೆ ಚೈತ್ರಮಾಸ ಮಾವು-ಬೇವುಗಳ ಚಿಗುರಿನ ಜತೆಗೆ ಇಡೀ ಪ್ರಕೃತಿಯೇ ಹಸಿರಾಗಿ ಕಂಗೊಳಿಸುವ ದಿನಗಳು.

ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಪ್ರಖರವಾದ ಬಿಸಿಲು ಇರುತ್ತದೆ. ಬಿಸಿಲಿನ ದಗೆ ಹೆಚ್ಚಿದಷ್ಟೂ ಗೃಹ ಬಳಕೆಯ ಸಾಧನಗಳ ಮೂಲಕ ನಾವು ತಂಪು ಮಾಡಿಕೊಳ್ಳಲು ಮುಂದಾಗುತ್ತೇವೆ.

ಹವಾನಿಯಂತ್ರಿತ ಪರಿಕರಗಳು, ಕೂಲರ್‌ಗಳು, ರೆಫ್ರಿಜಿರೇಟರ್‌ಗಳು, ಫ್ಯಾನ್ ಮತ್ತಿತರ ಸಾಧನಗಳು ಹಗಲು-ರಾತ್ರಿಕಾರ್ಯ ನಿರ್ವಹಿಸಬೇಕಾಗುತ್ತದೆ. ಹಾಗಾಗಿ ಈ ಸಂದರ್ಭದಲ್ಲಿ ವಿದ್ಯುತ್ ಬಳಕೆಯೂ ಹೆಚ್ಚಾಗುತ್ತದೆ. ಹಳ್ಳಿಗಳಲ್ಲಿ ಹಾಗೂ ಕೃಷಿ ಪ್ರದೇಶಗಳಲ್ಲಿ ಬೆಳೆಗಳಿಗೆ ನೀರುಣಿಸಲು ಪಂಪ್‌ಸೆಟ್‌ಗಳು ಸದಾ ಚಾಲನೆಯಲ್ಲಿರಬೇಕಾಗುತ್ತದೆ.

ಈ ಮಧ್ಯೆ ಬೇಸಿಗೆಯಲ್ಲಿ ಆಗಾಗ್ಗೆ ಮಳೆ ಬೀಳುವುದೂ ಸಾಮಾನ್ಯ. ಆದರೆ ಈ ವರ್ಷ ಮೇ ತಿಂಗಳಿನಲ್ಲಿ ಅಧಿಕ ಮಳೆ ಬಿರುಗಾಳಿ ಹಾಗೂ ಸಿಡಿಲುಗಳಿಂದ ಬೆವಿಕಂ ೮ ಜಿಲ್ಲೆಗಳಲ್ಲಿ ಅಧಿಕವಾಗಿದ್ದು, ಬಿರುಸಿನ ಮಳೆ ಮತ್ತು ಗಾಳಿಗೆ ಮರಗಳು ಬಿದ್ದು ವಿದ್ಯುತ್ ಕಂಬಗಳು ಬೀಳುವುದು, ತಂತಿ ತುಂಡಾಗುವುದು. ಪರಿವರ್ತಕಗಳು ಸುಟ್ಟು ಹೋಗುವುದು ಆಗಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಗಲು ರಾತ್ರಿ ಎನ್ನದೇ ಶ್ರಮಿಸಿ ಗ್ರಾಹಕರಿಗೆ ವಿದ್ಯುತ್ ಪೂರೈಸುವಲ್ಲಿ ತುಂಬಾ ಶ್ರಮ ವಹಿಸಿರುತ್ತಾರೆ. ಇದು ಶ್ಲಾಘನೀಯ.

ಸಾರ್ವಜನಿಕರ ದೂರುಗಳನ್ನು ಸಹನೆಯಿಂದ ಆಲಿಸಿ ಸೂಕ್ತ ಪರಿಹಾರ ದೊರಕಿಸುವತ್ತ ಕಾರ್ಯೋನ್ಮುಖರಾಗಬೇಕೆಂಬುದು ನನ್ನ ಮನವಿ. ಈ ನಡುವೆ 'ಕೋವಿಡ್' ನಾಲ್ಕನೇ ಅಲೆ ಸಾಧ್ಯತೆ ಬಗ್ಗೆ ಸರ್ಕಾರ ಈಗಾಗಲೇ ಎಚ್ಚರಿಸಿದೆ.

ಈ ನಿಟ್ಟಿನಲ್ಲಿ ಕಳೆದ ಎರಡು ವರ್ಷಗಳಿಂದ ಎಚ್ಚರಿಕೆ ವಹಿಸಿರುವ ನಾವು ಈಗಲೂ ನಮ್ಮ ಸುರಕ್ಷತಾ ಕ್ರಮಗಳನ್ನು ಮರೆಯಬಾರದು. ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸೋಣ

ತಮಗೆಲ್ಲರಿಗೂ ಶುಭಕೃತ್ ನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳು.

ವಂದನೆಗಳೊಂದಿಗೆ.

**ಎಸ್.ಆರ್.ನಾಗರಾಜ**
ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆವಿಕಂ.

# ನಮ್ಮ ಊರು ನಮ್ಮ ಜಿಲ್ಲೆ – ಉತ್ತರ ಕನ್ನಡ



ಕರಾವಳಿ, ಮಲೆನಾಡು ಮತ್ತು ಬಯಲು ಪ್ರದೇಶಗಳನ್ನು ಹೊಂದಿರುವ ಉತ್ತರ ಕನ್ನಡ ಜಿಲ್ಲೆ ರಾಜ್ಯದಲ್ಲಿಯೇ ವಿಭಿನ್ನ ಭೌಗೋಳಿಕ ಪರಿಸರಗಳಿಂದ ಕೂಡಿದೆ.

ಮಲೆನಾಡು ಭಾಗದಲ್ಲಿ ದಟ್ಟವಾದ ಅರಣ್ಯ, ವನ್ಯಜೀವಿ ಧಾಮಗಳು, ಸಹ್ಯಾದ್ರಿ ಪರ್ವತ ಶ್ರೇಣಿ, ಹರಿಯುವ ನದಿಗಳು, ರಮಣೀಯ ಜಲಪಾತಗಳು, ಕರಾವಳಿಯ ಸುಂದರ ಸಮುದ್ರ ತೀರಗಳು, ಗತ ವೈಭವವನ್ನು ಸಾರುವ ಐತಿಹಾಸಿಕ ಮತ್ತು ಪೌರಾಣಿಕ ಯಾತ್ರಾ ಸ್ಥಳಗಳು, ಇತ್ಯಾದಿಗಳಿಂದಾಗಿ ಈ ಜಿಲ್ಲೆಯನ್ನು ಪ್ರವಾಸಿಗರ ಸ್ವರ್ಗ ಎಂದೇ ಕರೆಯುತ್ತಾರೆ.

ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಜೊಯಿಡ, ಹಳಿಯಾಳ, ಯಲ್ಲಾಪುರ, ಶಿರಸಿ, ಸಿದ್ದಾಪುರ ಹಾಗೂ ಮುಂಡಗೋಡ ಹೀಗೆ ಒಟ್ಟು 11 ತಾಲ್ಲೂಕುಗಳನ್ನು ಹೊಂದಿದೆ. ಈ ಜಿಲ್ಲೆಗೆ ಈಗ ದಾಂಡೇಲಿಯನ್ನು ಹೊಸ ತಾಲ್ಲೂಕಾಗಿ ಸೇರಿಸಿ ಸಂಖ್ಯೆ 12 ಕ್ಕೆ ಏರಿದೆ.

ಸುಮಾರು 14 ಲಕ್ಷ ಜನಸಂಖ್ಯೆ ಹೊಂದಿರುವ ಈ ಜಿಲ್ಲೆಯಲ್ಲಿ ಪ್ರಮುಖ ಬೆಳೆಗಳಾಗಿ ಅಡಿಕೆ, ಭತ್ತ, ತೆಂಗು ಹಾಗೂ ಮೆಣಸಿನಕಾಯಿ ಬೆಳೆಯಲಾಗುತ್ತದೆ.

**ಕೂರ್ಮಗಡ ನಡುಗಡ್ಡೆ** : ಕಾರವಾರದ ಸುತ್ತಲೂ ಇರುವ ಅನೇಕ ಪ್ರೇಕ್ಷಣೀಯ ಸ್ಥಳಗಳಲ್ಲಿ ಕೂರ್ಮಗಡವು ಬಹಳ ಜನಪ್ರಿಯವಾಗಿದೆ. ಕಾರವಾರದಿಂದ 7 ಕಿ.ಮೀ. ದೂರದಲ್ಲಿದೆ.

ಅರಬ್ಬಿ ಸಮುದ್ರದಲ್ಲಿ ಆಮೆಯ ಆಕಾರದಲ್ಲಿರುವ ಈ ನಡುಗಡ್ಡೆಗೆ 'ಕೂರ್ಮಗಡ' ಎಂಬ ಹೆಸರನ್ನಿಡಲಾಗಿದೆ. ರಜೆ ದಿನಗಳಲ್ಲಿ ಜನರು ವಿಹಾರಕ್ಕಾಗಿ ಇಲ್ಲಿಗೆ ಬರುತ್ತಾರೆ.

**ಇಡಗುಂಜಿ ಕ್ಷೇತ್ರ** : ಹೊನ್ನಾವರದಿಂದ 13 ಕಿ.ಮೀ. ದೂರದಲ್ಲಿರುವ ಇಡಗುಂಜಿಯ ಗಣಪತಿ ಉತ್ತರ



ಕರ್ನಾಟಕದಲ್ಲಿ ಬಹಳ ಪ್ರಸಿದ್ಧವಾದ ದೇವತೆ. ಈ ಗಣಪನಿಗೆ ಎರಡೇ ಕೈಗಳು.

ಈ ರೀತಿಯ ದ್ವಿಭುಜ ಗಣಪತಿಯ ವಿಗ್ರಹಗಳಿರುವುದು ಕೇವಲ ಎರಡೇ ಸ್ಥಳಗಳಲ್ಲಿ ಮಾತ್ರ. ಒಂದು ಇಡಗುಂಜಿ ಮತ್ತೊಂದು ಗೋಕರ್ಣದಲ್ಲಿ.

ಪ್ರತಿ ವರ್ಷವೂ ರಥಸಪ್ತಮಿಯ ದಿನ ಗಣಪತಿಯ ರಥೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಸಹಸ್ರಾರು ಮಂದಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ.

**ಗೋಕರ್ಣ**: ಕುಮಟಾದಿಂದ 18 ಕಿ.ಮೀ ದೂರದಲ್ಲಿರುವ ಗೋಕರ್ಣ ದಕ್ಷಿಣದ ಕಾಶಿ ಎಂದೇ ಪ್ರಸಿದ್ಧವಾದ ಪುಣ್ಯಕ್ಷೇತ್ರ.



ಲಂಕಾಧಿಪತಿ ರಾವಣನಿಂದ ಪ್ರತಿಷ್ಠಾಪಿಸಲ್ಪಟ್ಟ ಆತ್ಮಲಿಂಗವು ಇಲ್ಲಿದ್ದು ಇದಕ್ಕೆ ಪೌರಾಣಿಕ ಮಹತ್ವವಿದೆ. ಪುರಾಣ ಪ್ರಸಿದ್ಧವಾದ ಮಹಾಬಲೇಶ್ವರ ದೇವಾಲಯ ಇಲ್ಲಿದೆ. ಇದೊಂದು ಪ್ರಮುಖ ಶೈವ ಯಾತ್ರಾ ಸ್ಥಳವಾಗಿದೆ.

**ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಮಹಾಬಲೇಶ್ವರ ಲಿಂಗಕ್ಕೆ ಅಷ್ಟಬಂಧ ಕ್ರಿಯೆ ನಡೆಯುವ ಪದ್ಧತಿ ಇದೆ.**

**ಮಧುಕೇಶ್ವರ ದೇವಾಲಯ** : ಶಿರಸಿಯಿಂದ 22 ಕಿ.ಮೀ. ದೂರದ ಬನವಾಸಿ, ವರದಾ ನದಿಯ ದಡದ ಮೇಲಿರುವ ಐತಿಹಾಸಿಕ ನಗರ ಕರ್ನಾಟಕದ ಚರಿತ್ರೆಯಲ್ಲಿ ಮರೆಯಲಾಗದ ಹೆಸರು. ತಮ್ಮ ಸತತ ಪ್ರಯತ್ನದಿಂದ ಬನವಾಸಿಯನ್ನು ಸ್ವರ್ಣ ಭೂಮಿಯನ್ನಾಗಿ ಪರಿವರ್ತಿಸಿದ ಕದಂಬರ ರಾಜಧಾನಿಯಾಗಿತ್ತು.

ಶಾಸನಗಳಲ್ಲಿ 'ವನವಾಸಿ' ಎಂಬ ಹೆಸರೂ ಇದೆ. ಪುರಾಣಗಳ ಪ್ರಕಾರ ಮಧು ಎಂಬ ದೈತ್ಯನು ಶಿವನಿಗಾಗಿ ಈ ದೇವಾಲಯವನ್ನು ಕಟ್ಟಿಸಿ ಮಧುಕೇಶ್ವರ ಎಂಬ ಹೆಸರನ್ನಿಟ್ಟನಂತೆ.

ದೇವಾಲಯದ ಒಳಗಡೆ ಇರುವ ಕಂಬಗಳ ಪ್ರಾಂಗಣ, ನಂದಿಯ ಬೃಹದಾಕಾರದ ವಿಗ್ರಹ, ಕಲ್ಲಿನಿಂದ ಕಡೆದ ಮಂಚ ಇತ್ಯಾದಿಗಳು ನೋಡುಗರ ಗಮನ ಸೆಳೆಯುತ್ತವೆ.

**ಶಿರಸಿ–ಮಾರಿಕಾಂಬ ದೇವಾಲಯ** : ಶಿರೀಷಪುರ ಎಂದು ಖ್ಯಾತಿವೆತ್ತ ಶಿರಸಿಯ ಸಿರಿದೇವಿ ಮಾರಿಕಾಂಬಾ. ನಾಡಿನಾದ್ಯಂತ ಭಕ್ತವೃಂದವನ್ನು ಹೊಂದಿರುವ ಈ ದೇವತೆ ಜಾಗೃತ ಶಕ್ತಿ ಪೀಠದ ತಾಣ ಎಂಬುದು ಭಕ್ತರ ನಂಬಿಕೆಯಾಗಿದೆ.

ಈ ದೇವಾಲಯವನ್ನು ಹೆಚ್ಚಾಗಿ ಮರದಿಂದಲೇ ನಿರ್ಮಾಣ ಮಾಡಲಾಗಿದೆ.

ಪ್ರತಿ ಎರಡು ವರ್ಷಗಳಿಗೊಮ್ಮೆ ಮಾರಿಕಾಂಬೆಯ ಭಾರಿ ಜಾತ್ರೆ ನಡೆಯುತ್ತದೆ. ನವರಾತ್ರಿ ಉತ್ಸವ ದೇವಿಯ ಜಯಂತಿ ಮತ್ತು ಕಾರ್ತೀಕೋತ್ಸವ ಇಲ್ಲಿನ ಪ್ರಮುಖ ಉತ್ಸವಗಳು.

**ಮುರುಡೇಶ್ವರ ಶಿವಕ್ಷೇತ್ರ** : ಭಟ್ಕಳದಿಂದ 16 ಕಿ.ಮೀ. ದೂರದ ಸಮುದ್ರದ ದಂಡೆಯಲ್ಲಿ ಮುರುಡೇಶ್ವರ ಶಿವಾಲಯವಿದೆ.

ಇದು ರಾಷ್ಟ್ರೀಯ ಪ್ರಖ್ಯಾತಿಯನ್ನು ಪಡೆದ ಪ್ರೇಕ್ಷಣೀಯ ಸ್ಥಳವೂ ಆಗಿದೆ.

ಪ್ರಾಚೀನ ಕ್ಷೇತ್ರವಾಗಿದ್ದರೂ ಸಹ ಕಲಾತ್ಮಕ ರೀತಿಯಲ್ಲಿ ಪುನರ್ ನಿರ್ಮಾಣಗೊಂಡು ಪ್ರವಾಸಿಗರಿಗೆ ಬೇಕಾದ ಅನುಕೂಲಗಳನ್ನು ಒದಗಿಸಲಾಗಿದೆ.

ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ನಿಲ್ಲಿಸಿರುವ ಮುರುಡೇಶ್ವರ ದೇವಾಲಯದ ಮಹಾದ್ವಾರವು ಸುಂದರವಾಗಿದೆ.



ದೇವಾಲಯವು ಸಮುದ್ರದ ಅಲೆಗಳಿಂದ ಸುತ್ತುವರಿಯಲ್ಪಟ್ಟಿದೆ. ತಪೋ ಭಂಗಿಯಲ್ಲಿ ಚಿನ್ಮೂಲಾದ್ರಿ ಆಸನದಲ್ಲಿ ಕುಳಿತು ಧ್ಯಾನ ಮಾಡುತ್ತಲಿರುವ 37 ಮೀಟರು ಎತ್ತರದ ಶಿವನ ಪ್ರತಿಮೆ ಇದೆ.

**ಸದಾಶಿವಗಡ ಕೋಟೆ** : ಕಾರವಾರ ಮತ್ತು ಗೋವಾ ಗಡಿಗೆ ಅನತಿ ದೂರದಲ್ಲಿರುವ ಸದಾಶಿವಗಡ ಕೋಟೆಯು ಐತಿಹಾಸಿಕ ಮತ್ತು ನಿಸರ್ಗ ಶೋಭಿತ ಸ್ಥಳವೂ ಆಗಿದೆ, ಒಂದೆಡೆ ವಿಶಾಲ ಅರಬ್ಬಿ ಸಮುದ್ರ, ಅಲೆಗಳ ನರ್ತನ, ಮೀನುಗಾರರ ಸಾಹಸ. ಇನ್ನೊಂದೆಡೆ ಹಚ್ಚಹಸುರಿನ ಸಹ್ಯಾದ್ರಿಯ ಬೆಟ್ಟಗಳ ಸಾಲು. ಅದರಡಿಯಲ್ಲಿ ಕಾಳಿ ನದಿಯ ಸೇತುವೆ. ಬಲಕ್ಕೆ ತಿರುಗಿದರೆ ಅಂಜುದೀವ್, ದೇವಗಡ, ದೇವಬಾಗದ ದ್ವೀಪಗಳ ನೋಟ. ಹಿಂದಕ್ಕೆ ತಿರುಗಿದರೆ ಕೈಗಾ ಯೋಜನೆ. ಹೀಗೆ ಎಲ್ಲವನ್ನೂ ಒಂದೇ ಕಡೆ ನೋಡಲು ಸಿಗುವ ಸ್ಥಳವೇ ಸದಾಶಿವಗಡ.

ಊರಿನ ಪಕ್ಕದ ಗುಡ್ಡದ ಮೇಲಿರುವುದೇ ಸದಾಶಿವಗಡ ಕೋಟೆ. ಮೇಲೇರಿದರೆ ಸದಾಮನ ಮೋಹಕ ಸೌಂದರ್ಯವನ್ನು ಸವಿಯಬಹುದು.

**ಯಾಣದ ಶಿಖರಗಳು** : ಈ ಜಿಲ್ಲೆಯ ಯಾಣದ ಶಿಖರಗಳು ವಿಶ್ವದ ಪ್ರವಾಸಿಗರನ್ನು ಆಕರ್ಷಿಸಿದ ಅತ್ಯಪೂರ್ವ ನಿಸರ್ಗ ತಾಣವಾಗಿದೆ.

ನಭೋಮಂಡಲಕ್ಕೆ ಮುಖವನ್ನು ಚಾಚಿ ನಿಂತಿರುವ ಪಾರ್ವತಿ, ಸಸ್ಯರಾಜ ಮತ್ತು ಭೈರವೇಶ್ವರ, ಶಿಖರಗಳು ಕಲೆ, ಕಾವ್ಯ ಮತ್ತು ನಿಸರ್ಗದ ಚೆಲುವಿಗೆ ಇನ್ನೊಂದು ಹೆಸರಾಗಿವೆ.

ಇವಲ್ಲದೆ ಇಲ್ಲಿ 60ಕ್ಕೂ ಹೆಚ್ಚಿನ ಉಪ-ಶಿಖರಗಳು ಇದ್ದು ಚಾರಣಪ್ರಿಯರಿಗೆ ಇದು ಸವಾಲಿನ ಸ್ಥಳವಾಗಿದೆ.

ಯಾಣವು ಕೇವಲ ನಿಸರ್ಗ ಸೌಂದರ್ಯಕ್ಕೆ ಮಾತ್ರ ಸೀಮಿತವಾಗದೆ ಅಪರೂಪದ ಶೈವ ಕ್ಷೇತ್ರವೂ ಆಗಿದೆ. ಈ ಶಿಖರಗಳ ಬುಡದಲ್ಲಿ ಭೈರವೇಶ್ವರ ಶಿವಾಲಯ ಮತ್ತು ಗೋಪಾಲಕೃಷ್ಣ ದೇವರ ಸುಂದರ ದೇವಾಲಯವೂ ಇದೆ.

ಮಹಾಶಿವರಾತ್ರಿಯ ದಿನಗಳಲ್ಲಿ ಸಾವಿರಾರು ಭಕ್ತರು ಇಲ್ಲಿಗೆ ಆಗಮಿಸುತ್ತಾರೆ.

**ಮಾಗೋಡು ಜಲಪಾತ**: ಯಲ್ಲಾಪುರದ ಸಮೀಪದಲ್ಲಿರುವ ಮಾಗೋಡು ಜಲಪಾತವು ಮೂರು ಧಾರೆಗಳಾಗಿ ಪ್ರಪಾತಕ್ಕೆ ಧುಮ್ಮಿಕ್ಕುವ ದೃಶ್ಯವನ್ನು ನೋಡಲು ನೂರಾರು ಪ್ರವಾಸಿಗರು ಬರುತ್ತಾರೆ.

ಮಳೆಗಾಲದಲ್ಲಿ ತುಂಬಿ ಹರಿದರೂ ಬೇಸಿಗೆಯಲ್ಲಿಯೂ ಈ ಜಲಪಾತವನ್ನು ನೋಡಬಹುದು.

ಧಾರವಾಡದ ಸೋಮೇಶ್ವರ ದೇವಾಲಯದ ಬಳಿಯಲ್ಲಿರುವ ಕೆರೆಯಲ್ಲಿ ಹುಟ್ಟುವ ಶಾಲ್ಮಲಾ ನದಿಯು



ಕಲಘಟಗಿ ಹತ್ತಿರದಲ್ಲಿ ಹುಬ್ಬಳ್ಳಿಯಿಂದ ಬರುವ ಹೊಳೆಗೆ ಸೇರಿ ಬೇಡ್ತಿ ನದಿ ಎಂಬ ಹೆಸರನ್ನು ಪಡೆಯುತ್ತದೆ.

ಈ ನದಿಯು ಮುಂದೆ ಸುಮಾರು 40 ಕಿ.ಮೀ. ಕಡಿದಾದ ಬೆಟ್ಟಗುಡ್ಡಗಳ ನಡುವೆ ಹರಿದು ಮಾಗೋಡಿನಲ್ಲಿ ಸೌಮ್ಯ, ರಮ್ಯ ಮತ್ತು ಭವ್ಯ ಎಂಬ ಹೆಸರಿನ ಮೂರು ಧಾರೆಗಳಲ್ಲಿ ಧುಮುಕುತ್ತದೆ.

ಇಂತಹ ನಿಸರ್ಗ ಸುಂದರವಾದ ಜಲಪಾತಗಳು ಉತ್ತರಕನ್ನಡ ಜಿಲ್ಲೆಯಲ್ಲಿ ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಕಾರವಾರ ಮತ್ತು ಭಟ್ಕಳದಲ್ಲಿ ಬಂದರುಗಳಿದ್ದು ಸುಂದರವಾದ ಕಡಲ ತೀರವನ್ನು ಹೊಂದಿವೆ.

ಹೀಗೆ ಹತ್ತಾರು ಪ್ರವಾಸಿ ತಾಣಗಳು ಹಾಗೂ ಪುಣ್ಯಕ್ಷೇತ್ರಗಳಿಗೆ ಈ ಜಿಲ್ಲೆ ಹೆಸರಾಗಿದೆ.

# ಪಿ.ಬಿ. ಶ್ರೀನಿವಾಸ್

**ಬಹು ಭಾಷಾ ಗಾನ ವಿಶಾರದರಾಗಿದ್ದ ಅಪ್ರತಿಮ ಗಾಯಕ ಪಿ.ಬಿ. ಶ್ರೀನಿವಾಸ್ ಕನ್ನಡ ನಾಡಿನಲ್ಲಿಯೂ ಮನೆ ಮಾತಾಗಿದ್ದವರು.** ವಯಸ್ಸಿನಲ್ಲಿ ಎಂಟು ದಶಕಗಳನ್ನು ಕಳೆದಿದ್ದರೂ ಅವರ ಧ್ವನಿಯಲ್ಲಿ ಮೊನಚು, ಸೊಗಸಿನ ಸೊಗಡು, ತಿರುವುಗಳು ಸ್ಪಷ್ಟವಾಗಿ ಮಧುರವಾಗಿದ್ದವು.

ಅವರ ಪೂರ್ಣ ಹೆಸರು **ಪ್ರತಿವಾದಿ ಭಯಂಕರ ಶ್ರೀನಿವಾಸ್, ಪ್ರತಿವಾದಿ ಭಯಂಕರ** ಎನ್ನುವುದು ಇವರ ಮನೆತನಕ್ಕೆ ಇದ್ದ ಹೆಸರು. ಇವರ ವಂಶಸ್ತರು ವಾದ ಮಾಡುವುದರಲ್ಲಿ ತುಂಬಾ ಪ್ರಸಿದ್ಧವಾಗಿದ್ದರಂತೆ. ಪಿ.ಬಿ.ಎಸ್ ಮಾತ್ರ ವಾದ ವಿವಾದಗಳಿಗೆ ಸಿಲುಕಿದ್ದನ್ನು ನಾವು ಎಂದೂ ಓದಿದ್ದೇ ಇಲ್ಲ. ಅಂತಹ ಸಜ್ಜನ. ಅವರು 1930 ರ ಸೆಪ್ಟೆಂಬರ್ 22 ರಂದು ಆಂಧ್ರಪ್ರದೇಶದ ಕಾಕಿನಾಡದಲ್ಲಿ ಜನಿಸಿದರು. ಶಾಲಾ ದಿನಗಳಲ್ಲೇ ಸಂಗೀತದಲ್ಲಿ ಅಪಾರ ಆಸಕ್ತಿ. ಬಿ.ಕಾಂ ಪದವಿ ಪಡೆದು, ಕಾನೂನು ವ್ಯಾಸಂಗ ಮಾಡುತ್ತಿರುವಾಗ, ಪರಿಚಯವಾದ ಗೋವರ್ಧನ್ ಅವರ ಸಲಹೆಯಂತೆ ಜೆಮಿನಿ ಸ್ಟುಡಿಯೊದಲ್ಲಿ ವಾದ್ಯವೃಂದ ನೋಡಿಕೊಳ್ಳುತ್ತಾ ಸಂಗೀತ ಕಲಿಯ ತೊಡಗಿದರು.



ಪಿ.ಬಿ.ಶ್ರೀನಿವಾಸ್ ಅವರನ್ನು ಕನ್ನಡಕ್ಕೆ ಪರಿಚಯಿಸಿದವರು ಹೆಸರಾಂತ ನಿರ್ಮಾಪಕರೂ, ನಿರ್ದೇಶಕರೂ, ಕಲಾವಿದರೂ ಆಗಿದ್ದ ನಾಗೇಂದ್ರರಾಯರು. ಅವರು ಹಾಡಿದ ಮೊದಲ ಕನ್ನಡ ಹಾಡು ಜಾತಕಫಲ (1953) ಚಿತ್ರಕ್ಕೆ, ನಂತರ ಓಹಿಲೇಶ್ವರ, ಭಕ್ತ ಕನಕದಾಸ ಹೀಗೆ ಮುಂದುವರೆಯುತ್ತಾ ಹೋಯಿತು. ಡಾ.ರಾಜ್‌ಕುಮಾರ್ ಅವರಿಗೆ ಪಿ.ಬಿ.ಶ್ರೀನಿವಾಸ್ ಅವರ ಕಂಠ ಬಹಳ ಸೂಕ್ತವಾಗಿ ಹೊಂದುತ್ತಿತ್ತು. ಒಮ್ಮೆ ರಾಜ್ ಹೇಳಿದ್ದರು: **"ಪಿ.ಬಿ.ಶ್ರೀನಿವಾಸ್ ಧ್ವನಿ ನನಗೆ ಆತ್ಮವಿದ್ದಂತೆ"**. ವಿಷ್ಣುವರ್ಧನ್ ಅವರ ನಾಗರಹಾವು, ಭೂತಯ್ಯನ ಮಗ ಅಯ್ಯು, ಭಾಗ್ಯಜ್ಯೋತಿ, ಕಳ್ಳ ಕುಳ್ಳ ಮುಂತಾದ ಅನೇಕ ಚಿತ್ರಗಳಲ್ಲೂ ಪಿ.ಬಿ.ಎಸ್ ಹಾಡುಗಳು ಅಷ್ಟೇ ಸೊಗಸಾಗಿತ್ತು.

ಭಕ್ತ ಕನಕದಾಸ ಚಿತ್ರದ "ಬದುಕಿದೆನು ಬದುಕಿದೆನು ಭವ ಎನಗೆ" ಹಾಡು ಪಿ.ಬಿ.ಎಸ್ ಅವರಿಗೆ ಬಹಳ ಮೆಚ್ಚುಗೆಯಾದ ಗೀತೆಯಂತೆ. ಅವರು ಅದೇ ಚಿತ್ರದಲ್ಲಿ ಹಾಡಿದ ಕುಲ, ಕುಲ, ಕುಲವೆಂದು ಹೊಡೆದಾಡದಿರಿ, ಶೃಂಗಾರ ಶೀಲ ತುಂಬಾ ಮಧುರವಾಗಿ ಮೂಡಿ ಬಂದಿದೆ. ನಗು ನಗುತಾ ನಲಿ, ಬಾರೆ ಬಾರೆ, ಜನುಮ ಜನುಮದ ಅನುಬಂಧ, ನಾವಾಡುವ ನುಡಿಯೇ, ಕಣ್ಣಂಚಿನ ಈ ಮಾತಲಿ, ಇಳಿದು ಬಾ ತಾಯಿ, ಹಾಡೊಂದ ಹಾಡುವೆ, ನೀ ಮುಡಿದಾ ಮಲ್ಲಿಗೆ ಹೂವಿನ ಮಾಲೆ, ಆಕಾಶವೆ ಬೀಳಲಿ ಮೇಲೆ, ನಿಲ್ಲು ನಿಲ್ಲು ನೀ ನೀಲವೇಣಿ, ಆಹಾ ಮೈಸೂರು ಮಲ್ಲಿಗೆ, ವೇದಾಂತಿ ಹೇಳಿದನು, ದೀನ ನಾ ಬಂದಿರುವೆ, ಅಪಾರಕೀರ್ತಿ ಗಳಿಸಿ ಮೆರೆವ ಭವ್ಯ ನಾಡಿದು, ಒಲುಮೆಯ ಹೂವೇ ನೀ ಹೋದೆ ಎಲ್ಲಿಗೆ, ಎಲ್ಲಿ ಮರೆಯಾದೆ ವಿಠ್ಠಲ, ಕಂಡೆಹರಿಯ ಕಂಡೆ, ನಾನು ನೀನು ನೆಂಟರಯ್ಯ, ಹರಿನಾಮವೇಚೆಂದ, ಬೆಳದಿಂಗಳಿನ ನೊರೆ ಹಾಲು ಕೊಡದಲಿ ತುಂಬಿ ತಂದವಳೆ, ಒಲವೆ ಜೀವನ ಸಾಕ್ಷಾತ್ಕಾರ, ಜಗದೀಶನಾಡುವ ಜಗವೇ ನಾಟಕರಂಗ, ಮನವೇ ಮಂದಿರ, ನನ್ನವಳು ನನ್ನೆದೆಯ ಹೊನ್ನಾಡನಾಳುವಳು, ರವಿವರ್ಮನ ಕುಂಚದ ಕಲೆ ಬಲೆ, ದಿವ್ಯ ಗಗನ ವನವಾಸಿನಿ ಹೀಗೆ ಅವರ ಹಾಡುಗಳ ಪಟ್ಟಿಗೆ ಕೊನೆಯೇ ಇಲ್ಲ. ತಮಿಳಿನ ಜೆಮಿನಿ ಗಣೇಶನ್ ಅವರಿಗೂ ಪಿ.ಬಿ.ಎಸ್ ಅವರೇ ಬೇಕಿತ್ತು. ತಮಿಳಿನಲ್ಲೂ ಅವರ ಪ್ರತಿ ಹಾಡುಗಳು ಅಷ್ಟೇ ರೋಮಾಂಚನದ ಅನುಭವ ನೀಡುತ್ತವೆ. ಸ್ವತ ಪಿ.ಬಿ.ಎಸ್ ತೆಲುಗಿನವರಾದರೂ, ತೆಲುಗಿನಲ್ಲಿ ಘಂಟಸಾಲ ಮತ್ತು ಎಸ್.ಪಿ.ಬಿ ಅವರ ಹಾಡುಗಳೇ ಕಿವಿಗೆ ಬಿದ್ದದ್ದು ಹೆಚ್ಚು. ಅವರ ಮುಕುಂದ ಮಾಲ, ಶಾರದಾ ಸ್ತೋತ್ರ ಮುಂತಾದ ಸಂಸ್ಕೃತ ಶ್ಲೋಕಗಳನ್ನು ಕೇಳುವಾಗ ಉಂಟಾಗುವ ಆನಂದ ಅವರ್ಣನೀಯ. ಅವರ ಭಾದ್ರಪದ ಶುಕ್ಲದ ಚೌತಿಯಂದು, ಶರಣು ಶರಣಯ್ಯ ಶರಣು ಬೆನಕ ಮುಂತಾದ ಗೀತೆಗಳಿಲ್ಲದೆ ಗಣಪತಿ ಹಬ್ಬ ಆಚರಣೆಯೇ ವಿರಳ ಎನ್ನಬಹುದು.

ಪಿ.ಬಿ.ಶ್ರೀನಿವಾಸ್‌ರು ಹಿನ್ನೆಲೆ ಗಾಯಕರಲ್ಲದೆ ಸಹಸ್ರಾರು ಹಾಡುಗಳನ್ನು ಸುಮಾರು ಎಂಟು ಭಾಷೆಗಳಲ್ಲಿ ಬರೆದಿದ್ದಾರಂತೆ. ನೀಲ್ ಆರ್ಮ್ ಸ್ಟ್ರಾಂಗ್ ಅವರು ಪ್ರಥಮ ಬಾರಿಗೆ ಚಂದ್ರಯಾನ ಮಾಡಿ ಸಾಧಿಸಿದ ಯಶಸ್ಸನ್ನು ಕುರಿತು, ಪಿ.ಬಿ.ಎಸ್ ಬರೆದಿರುವ ಇಂಗ್ಲಿಷ್ ಗೀತೆಯನ್ನು ಅಂದಿನ ಅಮೆರಿಕದ ಅಧ್ಯಕ್ಷರೇ ಪ್ರಶಂಸಿಸಿದ್ದಾರಂತೆ. ಅವರು ಅಮೆರಿಕದಲ್ಲಿದ್ದ ಸಂದರ್ಭದಲ್ಲಿದ್ದಾಗ ಒಂದು ಸಮಾರಂಭದಲ್ಲಿ ಈ ಹಾಡನ್ನು ಕೇಳಿದ ಪ್ರಸಿದ್ಧ ವಿಶ್ವವಿದ್ಯಾಲಯದ ಮುಖ್ಯಸ್ಥರು ಅವರನ್ನು ಡಾಕ್ಟರೇಟ್ ಪದವಿಗೆ ಶಿಫಾರಸ್ಸು ಮಾಡಿದರು. ಹೀಗಾಗಿ ಪಿಬಿಎಸ್ ಅವರಿಗೆ ದೊರೆತ ಮೊದಲ ಡಾಕ್ಟರೇಟ್ ಗೌರವ ಅಮೆರಿಕ ವಿಶ್ವವಿದ್ಯಾಲಯದ್ದು.

ಕನ್ನಡದ ಹಿರಿಯ ನಟ ಡಾ.ರಾಜ್‌ಕುಮಾರ್ ಅವರ ಚಿತ್ರಗಳಲ್ಲಿ ಸ್ವಯಂ ರಾಜ್ ಅವರೇ ಹಾಡುತ್ತಿದ್ದರೇನೋ ಎಂಬ ಭಾವನೆ ಹುಟ್ಟಿಸುತ್ತಿದ್ದ ಪಿ.ಬಿ.ಎಸ್. ಅವರ ಬಗ್ಗೆ ತಾವೇ ಸ್ವಯಂ ಗಾಯಕರಾಗಿದ್ದರೂ ರಾಜ್ ಹೇಳುತ್ತಿದ್ದುದು **"ಪಿ.ಬಿ.ಶ್ರೀನಿವಾಸ್ ನನ್ನ ಶಾರೀರವಿದ್ದಂತೆ"** ಎಂದು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ತಮಿಳುನಾಡು ಸರ್ಕಾರ ನೀಡುವ ಉನ್ನತ ಪ್ರಶಸ್ತಿ "ಕಲೈ ಮಾಮಣಿ" ಸೇರಿದಂತೆ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಅವರು ಭಾಜನರಾಗಿದ್ದರು.

ಚಲನಚಿತ್ರಗೀತೆ, ಭಾವಗೀತೆ, ಭಕ್ತಿಗೀತೆ, ಹೀಗೆ ಹಲವು ಪ್ರಾಕಾರಗಳಲ್ಲಿ ಗಾಯಕರಾಗಿದ್ದ ಅವರು ಕೆಲವು ಕಾಲದ ಅನಾರೋಗ್ಯದಿಂದಾಗಿ 2013 ರ ಏಪ್ರಿಲ್ 14 ರಂದು ನಿಧನರಾದರು.

ಇವರು ನಮ್ಮ ಸಾಹಿತಿಗಳು

# ಪ್ರೊ. ಹಂಪ. ನಾಗರಾಜಯ್ಯ

ಕನ್ನಡ ಸಾರಸ್ವತ ಲೋಕದಲ್ಲಿ **'ಹಂಪನಾ'** ಎಂದೇ ಹೆಸರಾಗಿರುವ ಪ್ರೊ. ಹಂಪ ನಾಗರಾಜಯ್ಯ ಅವರು ನಾಡು ಕಂಡ ಬಹುಮುಖ ಪ್ರತಿಭೆಯ ಅದ್ಭುತ ವಿದ್ವಾಂಸ.

ಅವರನ್ನು ಸೃಜನಶೀಲತೆ, ವಿದ್ವತ್ತು, ಸಂಶೋಧನೆ ಮತ್ತು ಭಾಷಾ ವಿಜ್ಞಾನದ 'ಜ್ಞಾನ ಭಂಡಾರ' ಎಂದರೂ ಅತಿಶಯೋಕ್ತಿಯಾಗಲಾರದು. ವಿದ್ಯೆಯ ಅದಿದೇವತೆ ಸರಸ್ವತಿಯ ಔರಸ ಪುತ್ರರೋ ಎಂಬಂತೆ ಕನ್ನಡ ಸಾಹಿತ್ಯದ ಹಲವು ಪ್ರಾಕಾರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿರುವ ಅವರ ಲೇಖನಿಯಿಂದ 110 ಕ್ಕೂ ಹೆಚ್ಚು ಪುಸ್ತಕಗಳು ಪ್ರಕಟವಾಗಿವೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹಂಪಸಂದ್ರ ಎಂಬ ಗ್ರಾಮದಲ್ಲಿ 1936 ರ ಅಕ್ಟೋಬರ್ 7 ರಂದು ಪದ್ಮನಾಭಯ್ಯ ಮತ್ತು ಪದ್ಮಾವತಮ್ಮ ದಂಪತಿಯ ಪುತ್ರರಾಗಿ ಜನಿಸಿದರು. ತಂದೆಯವರು ಮನೆಯಲ್ಲಿ ನಡೆಸುತ್ತಿದ್ದ ವಿದ್ವತ್ಪೂರ್ಣ ಪ್ರವಚನಗಳು ಅಪಾರ ಪ್ರಭಾವ ಬೀರಿದವು.



ಗೌರಿಬಿದನೂರು, ಮಧುಗಿರಿ, ತುಮಕೂರುಗಳಲ್ಲಿ ಅವರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಪಡೆದರು.

ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. (ಆನರ್ಸ್) ಪದವಿ ಹಾಗೂ ಮೈಸೂರು ವಿಶ್ವವಿದ್ಯಾ-ನಿಲಯದಿಂದ ಎಂ.ಎ. ಪದವಿಯನ್ನು ಪಡೆದರು.

ಅವರಿಗೆ ಆಗಿನ ಕಾಲದಲ್ಲಿ ಕುವೆಂಪು, ತೀನಂಶ್ರೀ, ಡಿ.ಎಲ್.ನರಸಿಂಹಆಚಾರ್, ಎಸ್.ವಿ.ಪರಮೇಶ್ವರ ಭಟ್ಟ, ಕೆ.ವೆಂಕಟರಾಮಪ್ಪ, ದೇ.ಜವರೇಗೌಡ ಮುಂತಾದ ಸಾಹಿತ್ಯ ದಿಗ್ಗಜರ ಮಾರ್ಗದರ್ಶನ ದೊರೆಯಿತು,

ನಂತರ **ವಡ್ಡಾರಾಧನೆ** ಸಮಗ್ರ ಅಧ್ಯಯನಕ್ಕಾಗಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದರು.

1959 ರಿಂದ 1970 ರವರೆಗೆ ಮೈಸೂರಿನ ಮಹಾರಾಣಿ ಕಾಲೇಜು, ಶಿವಮೊಗ್ಗ ಸಹ್ಯಾದ್ರಿ ಕಾಲೇಜು, ಮಂಡ್ಯ, ದಾವಣಗೆರೆ, ಬೆಂಗಳೂರಿನಲ್ಲಿ ಕಾಲೇಜು ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದರು.

ನಂತರ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸಕರಾಗಿ, ಅಲ್ಲಿಯೇ ಕಲಾ ವಿಭಾಗದ ಮುಖ್ಯಸ್ಥರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿಯೂ ದುಡಿದರು.

ವಿವಿಧ ಅವಧಿಗಳಲ್ಲಿ ಜೈನ ಸಂಶೋಧನಾ ಕೇಂದ್ರ, ಜೈನ ಅಧ್ಯಯನ ಸಂಸ್ಥೆ, ಕನ್ನಡ ಸಂಸ್ಕೃತಿ ನಿರ್ದೇಶನಾಲಯಗಳ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ನಂತರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅವರು ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಕನ್ನಡದ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಲೇಖಕರ ಸುಮಾರು 300 ಕ್ಕೂ ಹೆಚ್ಚು ಮೌಲಿಕ ಪುಸ್ತಕಗಳನ್ನು ಪ್ರಕಟಿಸಿದರು.

ಹಂಪನಾ ಅವರು ದೇಶದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಿದ್ದಾರೆ. ಅದೇ ರೀತಿ ದೇಶ ವಿದೇಶಗಳಲ್ಲಿ ನಡೆದ ಹತ್ತಾರು ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿದ ಕೀರ್ತಿ ಅವರದಾಗಿದೆ.

ಅವರ ಪತ್ನಿ ಕಮಲಾ ಹಂಪನಾ ಅವರೂ ಸಾಹಿತ್ಯವೇತ್ತರು, ಉತ್ತಮ ವಾಗ್ಮಿಗಳು ಹಾಗೂ ನಾಡೋಜ ಪ್ರಶಸ್ತಿಗೆ ಭಾಜನರಾದವರು.

ಹಂಪನಾ ಅವರ ಮೌಲಿಕ ಕೃತಿಗಳಲ್ಲಿ 'ಚಾರುವಸಂತ' ಮಹಾಕಾವ್ಯ ಹಿಂದಿ ಸೇರಿದಂತೆ 16 ಭಾರತೀಯ ಭಾಷೆಗಳಿಗೆ ಹಾಗೂ ಇಂಗ್ಲಿಷ್‌ಗೆ ಅನುವಾದವಾಗಿದೆ.

ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ನಾಡೋಜ ಸೇರಿದಂತೆ ಹಲವು ಪ್ರಶಸ್ತಿ-ಪುರಸ್ಕಾರಗಳು ಅವರನ್ನು ಹುಡುಕಿಕೊಂಡು ಬಂದಿವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಯಕ್ಷಗಾನ ಅಕಾಡೆಮಿ, ಚಾವುಂಡರಾಯ ಪ್ರಶಸ್ತಿ, ಕಾವ್ಯಾನಂದ, ಶಾಸನ ಸಾಹಿತ್ಯ, ಅತ್ತಿಮಬ್ಬೆ ಪ್ರತಿಷ್ಠಾನದ ಚಿ.ನಾ.ಮಂಗಳಾ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಅವರಿಗೆ ಸಂದಿವೆ. ಅವರನ್ನು ಕುರಿತು ಹಲವು ಲೇಖಕರು ಸಂಭಾವನಾ ಗ್ರಂಥಗಳನ್ನು ಹೊರತಂದಿದ್ದಾರೆ.

ನಾಡಿನ ಹಲವು ಪ್ರಖ್ಯಾತ ಸಾಹಿತಿಗಳ ಸಾಲಿನಲ್ಲಿ ನಿಲ್ಲುವ ಹಂಪನಾ ಅವರು ಇಂದಿಗೂ ಕ್ರಿಯಾಶೀಲ-ರಾಗಿರುವುದು ಕನ್ನಡಿಗರ ಹೆಮ್ಮೆ ಎಂದೇ ಹೇಳಬಹುದು.

# ಯಾಣದ ಪ್ರಯಾಣ

.........ಹಿಂದಿನ ಸಂಚಿಕೆಯಿಂದ ಮುಂದುವರಿದುದು

ಹಾಗೆಯೇ ಬೆಟ್ಟಗಳನ್ನು ಹತ್ತಿ, ಇಳಿಯುತ್ತಾ ಕೊನೆಗೆ ನಕ್ಷೆಯಲ್ಲಿ ತೋರಿಸಿದ "ದೇವರಮನೆ" ಎಂಬ ಚಿಕ್ಕಹಳ್ಳಿ (7 ಮನೆ) ತಲುಪಿದೆವು. ಸುಮಾರು 5 ಕಿ.ಮೀ ಕ್ರಮಿಸಿದ ಎಲ್ಲರೂ ಬಾಯಾರಿಕೆಯಿಂದ ಅವರ ಮನೆ ಪ್ರವೇಶಿಸಿ ಸ್ವೇಚ್ಛೆಯಿಂದ ನೀರು ಕುಡಿದೆವು.

ಮೊದಲು ಹೊರಟ "ಪಾಂಡಾತಂಡ"ಕ್ಕಿಂತ ನಾವೇ ಮೊದಲು ಬಂದು ಸೇರಿದ್ದೆವು. ಅಲ್ಲಿಯೇ ವಿಶ್ರಮಿಸುತ್ತಿರುವಾಗ ಒಂದು ಸೋಜಿಗದ ಘಟನೆ ನಡೆಯಿತು. ಎಲ್ಲರನ್ನೂ ಅಣಕವಾಡುತ್ತಾ ಹೊರಟಿದ್ದ' ಸೀನ'ನ ಜೀನ್ಸ್‌ಪ್ಯಾಂಟ್ನೊಳಗೆ ಸೇರಿಕೊಂಡಿದ್ದ ಜಿಗಣೆಯೊಂದು ಅವನ ತೊಡೆಯ ಹಿಂಭಾಗದಲ್ಲಿ ರಕ್ತ ಹೀರುತ್ತಾ ಸಂತೋಷಪಡುತ್ತಿದ್ದರೂ ಅವನ ಗಮನಕ್ಕೆ ಬಂದಿರಲಿಲ್ಲ. ಅವನಿಂದ ಅಣಕವಾಡಿಸಿಕೊಂಡ ಮತ್ತೊಬ್ಬನು ಅವನ ಪ್ಯಾಂಟಿನಲ್ಲಾದ ಒಂದು ರೂಪಾಯಿ ನಾಣ್ಯದ ಗಾತ್ರದ ರಕ್ತದ ಕಲೆಯನ್ನು ತೋರಿಸುತ್ತಾ ಕುಣಿದಾಡತೊಡಗಿದನು. ಜಿಗಣೆಗಳು ನಮ್ಮ ಗಮನಕ್ಕೂ ಬರದಂತೆ ರಕ್ತ ಹೀರುತ್ತವೆಂದು ಪ್ರತ್ಯಕ್ಷ ನಿದರ್ಶನವನ್ನು ಕಂಡ ಎಲ್ಲರ ಎದೆಯಲ್ಲೂ ಒಂದು ತರಹದ ಅಳುಕು ಶುರುವಾಗಿತ್ತು. ಏಕೆಂದರೆ ನಮ್ಮ ಟ್ರೆಕ್ಕಿಂಗ್ ಎರಡನೇ ಹಂತದ ಪ್ರಯಾಣವು ಸುಮಾರು ಇನ್ನೂ ನಾಲ್ಕು ಕಿ.ಮೀ.ನಷ್ಟು ಇದ್ದು ಪ್ರಯಾಸದಾಯಕವಾಗಿರುತ್ತದೆ ಎಂದು ನಮಗೆ ಮೊದಲೇ ತಿಳಿಸಲಾಗಿತ್ತು, ಎರಡನೇ ಹಂತದ ಪ್ರಯಾಣ ತುಂಬಾ ಕಷ್ಟಕರ-ವಾದುದೆಂದೂ, ದಾರಿ ನೇರವಾಗಿದ್ದರೂ ಅತಿ ದುರಂತಮಯವಾದುದೆಂದೂ, ಜಿಗಣೆಗಳಿಂದ ತುಂಬಿ ತುಂಬಾ ಅಪಾಯಕಾರಿಯಾಗಿದೆಯೆಂದೂ ತಿಳಿಸಿದ್ದರು. ನಾವು 4 ಕಿ.ಮೀ ಕಾಲ್ನಡಿಗೆಯಲ್ಲಿ ಕ್ರಮಿಸಿ ಯಾಣವನ್ನು ತಲುಪಿ ಮತ್ತೆ ಅದೇ ವೇಗವಾಗಿ ಹಿಂದಿರುಗಿ ಬರಬೇಕಾಗಿತ್ತು. ಎಷ್ಟಾದರೂ ನಡೆಯುತ್ತೇವೆ ಎಂಬ ಅನಂತ ಧೈರ್ಯ ನಮ್ಮಲ್ಲಿತ್ತು. ಆದರೆ ಆ ಜಿಗಣೆಗಳ ರೌದ್ರರೂಪ ಕಂಡ ಮೇಲೆ ಎಂತಹ ಕಲ್ಲೆದೆಯ ಹೃದಯವೂ ಕರಗಿ ನೀರಾಗುವಂತಿತ್ತು, ಕ್ಷಣಾರ್ಧಗಳಲ್ಲಿ. ಆಗಲೇ ಮೂರೂವರೆ ಗಂಟೆಯಾಗಿತ್ತು. ಊಟಕ್ಕೆಂದು ಪ್ರತ್ಯೇಕವಾಗಿ ಸಮಯ ನೀಡಿದರೆ ಮತ್ತೆ ಹಿಂದಿರುಗಿ ಬರುವುದು ಕಷ್ಟವಾಗುತ್ತದೆಂದು, ಎಲ್ಲರ ಕೈಯಲ್ಲಿ ಅವರವರ ಪಾಲಿನ ಮೊಸರನ್ನ ಮತ್ತು ಇಡ್ಲಿಯ ಪ್ಯಾಕೇಟ್ ಕೊಡಲಾಯಿತು ಮತ್ತು ದಾರಿಯಲ್ಲಿ ಹೋಗುತ್ತಲೇ ತಿನ್ನಿರೆಂದು ಸೂಚನೆ ನೀಡಲಾಯಿತು.



ಗುಡ್ಡದ ಇಳಿಜಾರಿದೆಯೆಂದು ತುಂಬಾ ವೇಗವಾಗಿ ನಾನು ಮತ್ತು ನನ್ನ ಕೆಲವು ಗೆಳೆಯರು ಮುನ್ನುಗ್ಗಿದ್ದೆವು. ಆದರೆ ಆ ಹುಮ್ಮಸ್ಸು, ಉತ್ಸಾಹ, ಹುರುಪು ನೀರಾಗಲು ಬಹಳ ಸಮಯಬೇಕಾಗಲಿಲ್ಲ. ನೂರು ಮೀಟರ್ ನಡೆದಿದ್ದೆವೋ ಇಲ್ಲವೋ ಆಗಲೇ ಭಯಂಕರ ಅರಣ್ಯಪ್ರದೇಶ ಮೊದಲಿಗಿಂತಲೂ ದಟ್ಟವಾಗಿಯೂ, ಮೊದಲಿಗಿಂತಲೂ ತಂಪಾಗಿಯೂ, ಮೊದಲಿಗಿಂತಲೂ ಕತ್ತಲೆಯಿಂದ ಕೂಡಿ ನಮ್ಮ ಧೈರ್ಯಗೆಡಿಸುವಂತಿತ್ತು. ಹಗಲಿನಲ್ಲಿಯೇ ಸಂಜೆಗತ್ತಲು ಆವರಿಸಿತ್ತು. ಮುಗಿಲೆತ್ತರಕ್ಕೆ ಬೆಳೆದ ವಿವಿಧ ರೀತಿಯ ಹೆಮ್ಮರಗಳು ಆಗಸಕ್ಕೆ ಆಹ್ವಾನವೊಡ್ಡಿ ನಿಂತಿದ್ದವು. ಅಲ್ಲಲ್ಲಿ ದಾರಿಗೆ ಅಡ್ಡವಾಗಿ ಮುರಿದು ಬಿದ್ದ ಹೆಮ್ಮರಗಳು, ದಾರಿ ಹೋಕರಿಗೆ ಅಡ್ಡಿಯಾಗಿ ಮಲಗಿದ್ದವು. ಬೆಟ್ಟದ ನೆತ್ತಿಯಿಂದ ಪಾತಾಳದ ತಳವನ್ನು ಸೇರಲು ಹೊರಟಿರುವಂತಿದ್ದ ಇಳಿಜಾರಿನಲ್ಲಿ ವೇಗವಾಗಿಯೇ ನೋಡುತ್ತಲಿದ್ದೆವು. ಆದರೆ ಜಿಗಣೆಗಳು ಅಷ್ಟರಲ್ಲಿಯೇ ಜಾಗೃತವಾಗಿದ್ದವು. ಹಸಿವಿನಿಂದ ಪರಿತಪಿಸುತ್ತಿದ್ದ ನಾನು ಆಗಲೇ ಇಡ್ಲಿ ಪ್ಯಾಕೆಟ್ ಆಸ್ವಾದಿಸತೊಡಗಿದ್ದೆ. ಬೆನ್ನಿನಲ್ಲಿ ತೂಗಿಹಾಕಿಕೊಂಡಿದ್ದ ಬ್ಯಾಗ್ಬೇರೆ ಹೊಯ್ದಾಡುತ್ತಿತ್ತು, ಓಡುತ್ತಿರುವ ವೇಗಕ್ಕೆ. ಉಪ್ಪನ್ನು ಕರವಸ್ತ್ರದಲ್ಲಿ ಕಟ್ಟಿಕೊಂಡು, ನೀರಿನಲ್ಲಿ ತೊಯ್ಯಿಸಿ, ಹಾಕಿದ್ದ ಜೀನ್ಸ್ಪ್ಯಾಂಟಿನ ಪ್ಯಾಕೇಟ್ನಲ್ಲಿ ಇಟ್ಟುಕೊಂಡಿದ್ದೆ. ಪ್ಯಾಂಟಿನ ಕೆಳಭಾಗವನ್ನು ಸಾಕ್ಸೊಳಗೆ ಹಾಕಿ, ಅದರ ಮೇಲೆ ಭದ್ರವಾಗಿ ರಬ್ಬರ್ ಬ್ಯಾಂಡಿನಿಂದ ಸುತ್ತಿದ್ದೆ, ಯಾವ ಕಾರಣಕ್ಕೂ ಜಿಗಣೆಗಳಿಂದ ಆಕ್ರಮಿಸಿಕೊಳ್ಳಬಾರದೆಂದು. ಆದರೆ ಉತ್ತರ ಕರ್ನಾಟಕದ ಬಯಲು ಸೀಮೆಯಲ್ಲಿ ಹುಟ್ಟಿ ಬೆಳೆದ ನನಗೆ ಹೇಗೆ ಗೊತ್ತಾಗಬೇಕು ? ನಾನು ಮಾಡಿಕೊಂಡಿದ್ದ ಮುಂಜಾಗೃತಾ ಕ್ರಮ ಯಾವುದೂ ತೃಪ್ತಿಕರವಲ್ಲವೆಂದು. ಕಾಡಿನ ಸೀಳು ದಾರಿಯಲ್ಲಿ ಶರವೇಗದಲ್ಲಿ ಓಡುತ್ತಿದ್ದೆವು. ಅಷ್ಟರಲ್ಲಿ ಜಾಗೃತಗೊಂಡ ಜಿಗಣೆಗಳು ಆಕ್ರಮಣಕ್ಕೆ ಅಣಿಯಾಗಿ ಕಾಯುತ್ತಿದ್ದವು. ಎಷ್ಟೇ ವೇಗವಾಗಿ ಹೋದರೂ ಕಣ್ಣು ಮುಚ್ಚಿ ತೆರೆಯುವುದರಲ್ಲಿ ಶೂಮೇಲೆ ಹತ್ತಿದ ಜಿಗಣೆಗಳನ್ನು ಕಂಡು ಎದೆ 'ಝಲ್' ಎನ್ನುವಂತಾಗಿತ್ತು. ಕೈಯಲ್ಲಿ ಊಟದ ಪ್ಯಾಕೆಟ್ಬೇರೆ ಹಿಡಿದುಕೊಂಡಿದ್ದೆವು. ಕೊಡವಿಕೊಳ್ಳಲು ಕೂಡ ಅಶಕ್ತರಾಗಿದ್ದೆವು. ಅಂತೂ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ, ಒಬ್ಬರ ಶೂ ಮತ್ತು ಪ್ಯಾಂಟ್ಗೆ ಹತ್ತಿದ ಜಿಗಣೆಗಳನ್ನು ಮತ್ತೊಬ್ಬರು ತೋರಿಸುತ್ತಾ, ಏರಿದ ಜಿಗಣೆಗಳನ್ನು ಉಪ್ಪಿನಿಂದ ಉದುರಿಸುತ್ತಾ ನಾಗಾಲೋಟದಿಂದ ಓಡುತ್ತಿದ್ದೆವು.

ನಾನಂತೂ ಎಷ್ಟು ವೇಗವಾಗಿ, ಭಯಂಕರವಾಗಿ ಓಡಿದ್ದೆನೆಂದರೆ ಕೇವಲ ಹತ್ತೇ ನಿಮಿಷಗಳಲ್ಲಿ ಏರಿಳಿತಗಳಿಂದ ಕೂಡಿದ ಬೆಟ್ಟಪ್ರದೇಶವನ್ನು ಎರಡು ಕಿ.ಮೀ. ನಷ್ಟು ಕ್ರಮಿಸಿದ್ದೆನು. ಕೊನೆಗೆ ಪ್ರಶಾಂತತೆಯಿಂದ ಹೆದರಿಸುವಂತಿದ್ದ ಕಾನನದ ಮಧ್ಯದಲ್ಲಿ ಎರಡು ಝುರಿಗಳು ಭೋರ್ಗರೆಯುತ್ತಾ ಜೊತೆಯಾಗಿ ಸಾಗಿದ್ದ ಒಂದು ಪ್ರದೇಶಕ್ಕೆ ಬಂದು ಸೇರಿಕೊಂಡಿದ್ದೆವು.

– **ವೆಂಕಟೇಶ್ ಬಿ.,** ಉ.ಪ್ರ.ವ್ಯ (ಗು.ಪ್ರ ಮತ್ತು ಸು), ಬೆವಿಕಂ.

ಮುಂದುವರಿಯುವುದು.....

ಆರೋಗ್ಯವೇ ಭಾಗ್ಯ



## ಎಲೆಕೋಸು

ದಪ್ಪ ಅಗಲವಾದ ಎಲೆಗಳಿಂದ ಸುತ್ತಲ್ಪಟ್ಟು ಗೆಡ್ಡೆಯಂತೆ ಕಾಣುವ ಈ ಎಲೆಕೋಸಿನಲ್ಲಿ ಹೆಚ್ಚಿನ ಔಷಧೀಯ ಗುಣಗಳಿವೆ. ಅಧಿಕ ಆಹಾರ ಪೋಷಕಾಂಶಗಳೂ ಇವೆ.

ಇದನ್ನು ವಿಶ್ವದ ಎಲ್ಲಾ ಭಾಗಗಳಲ್ಲೂ ತರಕಾರಿಯನ್ನಾಗಿ ಬೆಳೆಯುತ್ತಾರೆ ಮತ್ತು ವಿವಿಧ ಆಹಾರ ರೂಪದಲ್ಲಿ ಉಪಯೋಗಿಸುತ್ತಾರೆ.



ದೇಹದ ಅಧಿಕ ತೂಕ ಮತ್ತು ಸ್ಥೂಲತೆಯನ್ನು ನಿವಾರಿಸಲು ಇದು ಸಹಕಾರಿ. ಕಾರಣ ಇದರಲ್ಲಿ ಜೀವಸತ್ವಗಳೂ, ಪೌಷ್ಟಿಕಾಂಶಗಳೂ ಮತ್ತು ಖನಿಜಗಳೂ ಇವೆ.

**ಎಲೆಕೋಸಿನ ಸಾಲಡ್**: ಇದನ್ನು ಟೊಮೊಟೊ, ಈರುಳ್ಳಿ, ಕೊತ್ತಂಬರಿ ಸೊಪ್ಪು ಜತೆಗೆ ಚಿಟಿಕೆ ಕಾಳು ಮೆಣಸಿನ ಪುಡಿ ಹಾಗೂ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ನಿತ್ಯ ಸೇವಿಸುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಹಕಾರಿ. ರಕ್ತ ಸಂಚಾರ ಕ್ರಮವರಿತು ನಡೆಯಲು ಹಾಗೂ ಮೂತ್ರ ದೋಷಗಳನ್ನು ನಿವಾರಿಸಲು ಇದರ ಸೇವನೆ ಉತ್ತಮ. ಕೋಸಿನ ಎಲೆಗಳನ್ನು ಚೆನ್ನಾಗಿ ಜಗಿಯುವುದರಿಂದ ವಸಡಿನಲ್ಲಿ ರಕ್ತ ಸೋರುವುದು ಹಾಗೂ ಹಲ್ಲು ನೋವು ನಿವಾರಿಸಲು ನೆರವಾಗುತ್ತದೆ.

ಎಲೆಕೋಸಿನ ರಸ ಎರಡು ಚಮಚ, ಜೇನು ಒಂದು ಚಮಚ, ನಿಂಬೆರಸ **ಅರ್ಧ ಹೋಳಿನಷ್ಟು** ಮಿಶ್ರಮಾಡಿ ನಿತ್ಯ ಸೇವಿಸುವುದರಿಂದ ಕರುಳಿನ ಹುಣ್ಣು ಹಾಗೂ ಮೂಲವ್ಯಾಧಿ ನಿವಾರಣೆಗೆ ಸಹಕಾರಿಯಾಗಲಿದೆ ಎಂಬುದು ತಜ್ಞರ ಅಭಿಪ್ರಾಯ.

## ಹಾಗಲಕಾಯಿ

ಇದೊಂದು ಸಾಮಾನ್ಯ ತರಕಾರಿ **'ಅಧರಕ್ಕೆ ಕಹಿ, ಉದರಕ್ಕೆ ಸಿಹಿ'** ಎಂಬ ನಾಣ್ನುಡಿಯಂತೆ ದೇಹದ ಆರೋಗ್ಯಕ್ಕೆ ಉತ್ತಮ ಗುಣವುಳ್ಳದ್ದಾಗಿದೆ. ಇದರಲ್ಲಿ ಎಲ್ಲಾ ಜೀವಸತ್ವಗಳೂ ಮತ್ತು ಲೋಹದ ಅಂಶಗಳೂ ಇರುತ್ತವೆ.

**ಮೂತ್ರದೋಷ ಮತ್ತು ಮಧುಮೇಹ ನಿವಾರಣೆಗೆ** : ಬಲಿತ ಹಾಗಲ ಕಾಯಿಗಳ ರಸ ಹಿಂಡಿಕೊಂಡು ನಾಲ್ಕು ಚಮಚದಷ್ಟು ರಸವನ್ನು ಬೆಳಗ್ಗೆಯೇ ಖಾಲಿ ಹೊಟ್ಟೆಯಲ್ಲಿ ಕುಡಿಯುತ್ತಾ ಬಂದರೆ ಮೂತ್ರದೋಷ ನಿವಾರಣೆಯಾಗಿ ಮಧುಮೇಹ ರೋಗವು ಹತೋಟಿಗೆ ಬರುವುದು.



ಕತ್ತಿ, ಚಾಕು, ಬ್ಲೇಡು ತಗುಲಿ ದೇಹದ ಯಾವುದೇ ಭಾಗದಲ್ಲಿ ರಕ್ತಸ್ರಾವವಾಗುತ್ತಿದ್ದರೆ ಹಾಗಲ ಎಲೆಗಳನ್ನು ಅರೆದು ಅದಕ್ಕೆ ಅಲ್ಪ ಪ್ರಮಾಣದಲ್ಲಿ ಸುಣ್ಣ ಬೆರೆಸಿ ಹಚ್ಚುವುದರಿಂದ ರಕ್ತಸ್ರಾವವು ನಿಲ್ಲುತ್ತದೆ.


ಒಂದು ಹಾಗಲಕಾಯಿ ರಸವನ್ನು ದಿನದಲ್ಲಿ ಮೂರು ಹೊತ್ತು ಕುಡಿಯುತ್ತಾ ಬಂದರೆ ಅತಿ ಬಾಯಾರಿಕೆ, ಹೊಟ್ಟೆನೋವು, ಭೇದಿಯಂತಹ ಸಮಸ್ಯೆಗಳು ನಿವಾರಣೆಯಾಗುತ್ತವೆ.

ಆಹಾರದಲ್ಲಿ ಯಥೇಚ್ಛವಾಗಿ ಹಾಗಲಕಾಯಿಯನ್ನು ಉಪಯೋಗಿಸುತ್ತಿದ್ದರೆ ಜ್ವರ, ಕೆಮ್ಮು, ಹೃದ್ರೋಗದಂತಹ ಕಾಯಿಲೆಗಳ ನಿವಾರಣೆಗೆ ಸಹಕಾರಿ ಎನ್ನಲಾಗಿದೆ.

ಕಗ್ಗದ ಬೆಳಕು

# ಕಾಲದ ನದಿಯಲ್ಲಿ ಬಾಳದೋಣಿ

ಕಾಲ ನದಿಯಲಿ ನಮ್ಮ ಬಾಳದೋಣಿಯು ಮೆರೆದು ।
ತೇಲುತ್ತ ಭಯವ ಕಾಣದೆ ಸಾಗುತಿರಲು ।।
ಗಾಳ ಯಾವಾಗಮೊ ಬಂದೆತ್ತಣಿಲೊ ಬೀಸುತ್ತ ।
ಮೇಲ ಕೀಳಾಗಿಪುದು - ಮಂಕುತಿಮ್ಮ ।।



ನಿನ್ನೆಯ ಅನುಭವದ ನೆನಪುಗಳ ಸಹಾಯದಿಂದ, ವರ್ತಮಾದ ಕ್ಷಣಗಳಿಗೆ ಸ್ಪಂದಿಸುತ್ತಾ, ಭವಿಷ್ಯವನ್ನು ಸೃಷ್ಟಿಸುವ ಪ್ರಕ್ರಿಯೆಯಲ್ಲಿ ಬದುಕು ಬದಲಾಗುತ್ತದೆ. ಈ ಬದಲಾವಣೆಯಲ್ಲಿ ನಮ್ಮ ನಿಯಂತ್ರಣಕ್ಕೆ ಒಳಪಟ್ಟೇ ಇರುತ್ತದೆ ಎನ್ನುವುದಕ್ಕಿಲ್ಲ. ಅದೆಷ್ಟೋ ತಿರುವುಗಳು, ಅಡೆತಡೆಗಳು ಅನಿರೀಕ್ಷಿತವಾಗಿ ಎದುರಾಗುತ್ತವೆ.

ಕಾಲವೆಂಬ ನದಿಯಲ್ಲಿ ಬಾಳದೋಣಿ ಸಾಗುತ್ತಿರುತ್ತದೆ. ಬೀಳುವ, ಮುಳುಗುವ ಭಯವಿಲ್ಲದೆ ಸುಖವಾಗಿ ಪಯಣ ಸಾಗುತ್ತಿರುವಾಗ ಸಂಭ್ರಮ, ಸಡಗರ ಮೇರೆ ಮೀರಿರುತ್ತದೆ. ಮನಸ್ಸು ಸುಖದಲ್ಲಿ ಓಲಾಡುತ್ತಿರುವಾಗ, ಸಂತೋಷವಷ್ಟೇ ಇದ್ದಾಗ ಎಲ್ಲರೂ ಧೈರ್ಯವಂತರೇ ಆಗಿರುತ್ತಾರೆ. ಯಾವುದೋ ಹೊತ್ತಿನಲ್ಲಿ ಇದ್ದಕ್ಕಿದ್ದಂತೆ ಸಂಕಟವೆಂಬ ಬಿರುಗಾಳಿಯು ಕ್ಷಣಾರ್ಧದಲ್ಲಿ ಬಾಳದೋಣಿಯನ್ನು ಮೇಲೆ ಕೆಳಗೆ ಮಾಡುತ್ತದೆ. ಇಂಥ ಸಂದರ್ಭದಲ್ಲಿ ವ್ಯಕ್ತಿ ಅದನ್ನು ಹೇಗೆ ನಿಭಾಯಿಸುತ್ತಾನೆ ಎನ್ನುವುದರಲ್ಲಿ ಆತನ ಸಾಮರ್ಥ್ಯವಿದೆ. ಇದು ಎಲ್ಲರ ಅನುಭವ.

ಬದುಕಿನುದ್ದಕ್ಕೂ ಆಕಸ್ಮಿಕಗಳನ್ನು ಎದುರುಗೊಳ್ಳಲೇಬೇಕು. ಹರುಷ ತುಂಬಿದ್ದ ಮನೆ-ಮನಗಳನ್ನು ಇದ್ದಕ್ಕಿದ್ದಂತೆಯೇ ವಿಷಾದವು ಕವಿಯುವುದು, ಸಂಕಟದಲ್ಲಿ ಕಂಗೆಟ್ಟ ಹೊತ್ತಿನಲ್ಲಿ, ಮನಸ್ಸನ್ನು ಹಗುರಾಗಿಸುವಂತಹ ಸನ್ನಿವೇಶಗಳು ನಿರ್ಮಾಣವಾಗುವುದು ಜೀವನ ಪಯಣದಲ್ಲಿ ಸಹಜ. ವ್ಯಕ್ತಿಯು ಸಮಚಿತ್ತನಾಗಿದ್ದರೆ ಈ ವೈಪರೀತ್ಯಗಳನ್ನು ಎದುರಿಸಬಲ್ಲ, ಕೆಲವರಲ್ಲಿ ನೋವನ್ನು ಸಹಿಸಿಕೊಳ್ಳುವ ಶಕ್ತಿಯೇ ಇರುವುದಿಲ್ಲ. ಇನ್ನು ಕೆಲವರು ಅಸಾಧ್ಯ ನೋವನ್ನೂ ಸಹಿಸಿಕೊಳ್ಳುವ ಶಕ್ತಿ ಸಹಜ ಸ್ವಭಾವವಾಗಬೇಕು.

ಜೀವನದಲ್ಲಿ ಸಂತಸವಷ್ಟೇ ಇರುವುದಿಲ್ಲ. ಆಗಾಗ ಕಷ್ಟ ಪರಂಪರೆಯನ್ನು ಎದುರಿಸಬೇಕಾಗುತ್ತದೆ. ಪರಿಹಾರಕಾಣದ ಸಮಸ್ಯೆಗಳಲ್ಲಿ ತೊಳಲಾಡಬೇಕಾಗುತ್ತದೆ. ಅಪರಿಮಿತ ಮನಶ್ಶಕ್ತಿಯನ್ನು ಹೊಂದಿರುವ ವ್ಯಕ್ತಿಯು ಸವಾಲುಗಳನ್ನು ಸಂಯಮದಿಂದ ಎದುರಿಸಿ ಗೆಲ್ಲುತ್ತಾನೆ. ಎದುರಿಸುವ ಹಂತದಲ್ಲಿ ಅಸಾಧ್ಯವೆನ್ನಿಸಿದ್ದೂ ದಿನ ಕಳೆದಂತೆ ಹಗುರವೆನ್ನಿಸುತ್ತದೆ.

ಸಮುದ್ರದಲ್ಲಿ ಈಜಲು ಹೋದವರು, ಅಲೆಗಳು ಮೇಲೆದ್ದಾಗ ನೀರಿನೊಳಗೆ ಬಾಗಿ ಅವುಗಳಿಂದ ತಪ್ಪಿಸಿಕೊಳ್ಳುತ್ತಾರೆ. ಅಲೆಯು ತೀರವನ್ನು ನೇವರಿಸಿಕೊಂಡು ಹೊರಟು ಹೋದ ಮೇಲೆ ತಲೆ ಎತ್ತುತ್ತಾರೆ. ಸಮುದ್ರದ ಅಲೆಗಳಂತೆಯೇ ಕಷ್ಟಗಳು ಬಂದು ಹೋಗುತ್ತವೆ. ಯಾವುದೂ ಸ್ಥಿರವಾಗಿ ಉಳಿಯುವುದಿಲ್ಲ. ತಾಳ್ಮೆ ಇದ್ದರೆ ಊಹೆಗೆ ನಿಲುಕದ ಬದಲಾವಣೆ ಕಾಣಬಹುದು. ವ್ಯಕ್ತಿ ತನ್ನ ನಿಜ ಶಕ್ತಿಯನ್ನರಿತಾಗ ಆತನ ಮನೋಬಲವು ವೃದ್ಧಿಯಾಗುತ್ತದೆ.

ಪ್ರಕೃತಿಯಲ್ಲಿ ಕಾಲ, ಋತುಗಳನ್ನು ಆಧರಿಸಿ ಕಾಣಬರುವ ಹವಾಮಾನದ ಬದಲಾವಣೆಗೆ ಜೀವಗಳು ಒಗ್ಗಿಕೊಳ್ಳುತ್ತವೆ. ಆದರೆ ವೈಯಕ್ತಿಕ ಬದುಕಿನಲ್ಲಿ ಒಂದಿನಿತು ವ್ಯತ್ಯಾಸವಾದರೂ ಅದಕ್ಕೆ ಹೊಂದಿಕೊಳ್ಳುವ ಮನಃಸ್ಥಿತಿ ಇರುವುದಿಲ್ಲ. ಹೇಗೆ ನಿಸರ್ಗದ ಆಗುಹೋಗುಗಳು ವ್ಯಕ್ತಿಯ ನಿಯಂತ್ರಣವನ್ನು ಮೀರಿ ನಡೆಯುತ್ತದೆಯೋ ಹಾಗೆಯೇ ಮನುಷ್ಯ ಜೀವನವೂ ಆತನ ನಿಯಂತ್ರಣದಲ್ಲಿರುವುದಿಲ್ಲ. ಬದುಕಿನಲ್ಲಿ ಎದುರಾಗುವ ಇಂತಹ ಸವಾಲುಗಳು ವ್ಯಕ್ತಿಯನ್ನು ಸದೃಢವಾಗಿಸುತ್ತವೆ. ಕಾಲದ ನಿರಂತರ ಚಲನೆಯಲ್ಲಿ ಆತಂಕಿತರಾಗದೆ, ದುಃಖಿಸದೆ, ಎಲ್ಲವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಬೆಳೆಸಿಕೊಳ್ಳಲೇಬೇಕು. ಮನವನ್ನು ಶಾಂತವಾಗಿರಿಸಿಕೊಂಡಷ್ಟೂ ನಿರ್ಧಾರಗಳು ಸ್ಪಷ್ಟವಾಗುತ್ತವೆ. ದೌರ್ಬಲ್ಯಗಳನ್ನು ಕಳಚಿಕೊಂಡು, ಸಂಯಮದಿಂದ ಯೋಚಿಸಿ ಪ್ರತಿಕ್ರಿಯಿಸುವ ಮೂಲಕ, ಜೀವನ ಪಯಣವನ್ನು ಸುಗಮಗೊಳಿಸಬಹುದು.

**ಡಿ.ವಿ.ಗುಂಡಪ್ಪ ಅವರ (ಕಗ್ಗದ ಬೆಳಕು)**

# ವಿನೂತನ ವಿನ್ಯಾಸದ ವಿದ್ಯುತ್ ಪರಿವರ್ತಕಗಳು

## ಬಿಪಿ ಇಂಡಿಯನ್ ಪಬ್ಲಿಕ್ ಸ್ಕೂಲ್ ಹತ್ತಿರ, ಮಲ್ಲೇಶ್ವರಂ


ಮೊದಲು


ನಂತರ

## 13ನೇ ಕ್ರಾಸ್, ಮಲ್ಲೇಶ್ವರಂ


ಮೊದಲು


ನಂತರ

## ಸಿರೂರ್‌ಪಾರ್ಕ್ ರೋಡ್, ಮಲ್ಲೇಶ್ವರಂ


ಮೊದಲು


ನಂತರ

## ನಿರ್ಮಲರಾಣಿ ಸ್ಕೂಲ್ ಹತ್ತಿರ, ಮಲ್ಲೇಶ್ವರಂ



ಮೊದಲು


ನಂತರ

## ವೈಯಾಲಿಕಾವಲ್, ಸಿ2 ಉಪವಿಭಾಗ


ಮೊದಲು


ನಂತರ




ಸ್ವಾತಂತ್ರ್ಯದ ಅಮೃತಮಹೋತ್ಸವ

ವಿದ್ಯುತ್ ಸಂಬಂಧಿತ ದೂರುಗಳಿಗೆ

# ಬೆಸ್ಕಾಂ WHATSAPP ಸಹಾಯವಾಣಿ




ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

"ವಾಟ್ಸ್ಆ್ಯಪ್" ಸಹಾಯವಾಣಿ ವಿವರ

ಬೆಂಗಳೂರು ನಗರ ಜಿಲ್ಲೆ

| | | |
|---|---|---|
| ದಕ್ಷಿಣ ವೃತ್ತ | : | 82778 84011 |
| ಪಶ್ಚಿಮ ವೃತ್ತ | : | 82778 84012 |
| ಪೂರ್ವ ವೃತ್ತ | : | 82778 84013 |
| ಉತ್ತರ ವೃತ್ತ | : | 82778 84014 |
| ಕೋಲಾರ | : | 82778 84015 |
| ಚಿಕ್ಕಬಳ್ಳಾಪುರ | : | 82778 84016 |
| ಬೆಂ. ಗ್ರಾಮಾಂತರ | : | 82778 84017 |
| ರಾಮನಗರ | : | 82778 84018 |
| ತುಮಕೂರು | : | 82778 84019 |
| ಚಿತ್ರದುರ್ಗ | : | 82778 84020 |
| ದಾವಣಗೆರೆ | : | 82778 84021 |



ಸನ್ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ವಿ. ಸುನೀಲ್ ಕುಮಾರ್ ಅವರು ಬೆಸ್ಕಾಂ ಸಹಾಯವಾಣಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿರುವುದು.

## 24/7 ಸಹಾಯವಾಣಿ – 1912

BESCOM | @NammaBescom | Nammabescom | helpline@bescom.co.in helplinebescom@gmail.com

Registration of online complaints – www.bescom.ipgrs.com | Bescom Mitra Mobile App



## ಸಂಪಾದಕ ಮಂಡಳಿ

| | |
|---|---|
| **ಶ್ರೀ ಪಿ.ರಾಜೇಂದ್ರ ಚೋಳನ್**, ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ದರ್ಶನ್ ಜೆ.**, ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಡಿ. ನಾಗಾರ್ಜುನ** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ನಾಗರಾಜ ಎಸ್.ಆರ್.** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) | ಸಂಪಾದಕರು |
| **ಶ್ರೀ ಕೆ. ತಿಪ್ಪೇಸ್ವಾಮಿ**, ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | ಸದಸ್ಯರು |
| **ಶ್ರೀ ಕೆ.ಬಲರಾಮ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರರೆಡ್ಡಿ**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ**, ಕವಿಪ್ರನಿನಿ ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಬಿ.ಮನೋಜ್‌ಕುಮಾರ್**, ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇಂ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ / ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ : **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.) ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-560 001.**
ಇ-ಮೇಲ್ ವಿಳಾಸ : gmcr@bescom.co.in

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ 1912**
**ಇ-ಮೇಲ್ ವಿಳಾಸ** : helplinebescom@gmail.com **ವೆಬ್‌ಸೈಟ್** : www.bescom.org